ಬೆಳಗಾವಿ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ.

989- ಶ್ರೀ ಬಿ.ಐ. ಪಾಟೀಲ್ (ಉಚ್ಚಂಗಾವ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ತಾಲ್ಲೂಕನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಅಭಾವ ಪರಿಹಾರ ಕಾರ್ಯಕ್ರಮಗಳಾವುವು?

ಇ) ಬೆಳಗಾವಿ ತಾಲ್ಲೂಕಿನಲ್ಲಿ ವಿವಿಧ ಅಭಾವ ಪರಿಹಾರ ಕಾರ್ಯಕ್ರಮಗಳಿಗಾಗಿ ಒದಗಿಸಿರುವ ಅನುದಾನವೇನು?

ಈ) ಕೃಷಿ ಬೆಳೆ ಹಾನಿಯಾದ ರೈತರಿಗೆ ಪರಿಹಾರ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು):

ಅ) ಘೋಷಿಸಿರುವುದಿಲ್ಲ.

ಆ) ಕುಡಿಯುವ ನೀರಿನ ಸಲುವಾಗಿ ಬೆಳಗಾವಿ ತಾಲ್ಲೂಕಿನಲ್ಲಿ ಒಟ್ಟು 60 ಕೊಳವೆ ಭಾವಿಗಳನ್ನು ಕೊರೆಯಲಾಗಿದೆ. ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ 28 ಮತ್ತು ಜವಹಾರ್ ರೋಜಗಾರ್ ಯೋಜನೆಯಡಿಯಲ್ಲಿ 113 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಇ) ಬೆಳಗಾವಿ ತಾಲ್ಲೂಕಿಗೆ ಕೆಳಕಂಡಂತೆ ಹಣವನ್ನು ಒದಗಿಸಿದೆ

		(ರೂ. ಲಕ್ಷಗಳಲ್ಲಿ)
1.	ಕುಡಿಯುವ ನೀರಿನ ಸಲುವಾಗಿ	29.07
2.	ಉದ್ಯೋಗ ಭರವಸೆ ಯೋಜನೆ	21.15
3.	ಜವಹಾರ್ ರೋಜಗಾರ್ ಯೋಜನೆ	30.87

ಈ) ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

Sri B.I. Patil (Uchgaon): Sir, the hon'ble Minister has given the answer which is misleading to the House. To my question (b) the answer given is `In Belgaum taluka totally 60 borewells have been drilled for drinking water purposes. 28 and 113 works have been taken up under Employment Assurance and Jawhar Rojgar Schemes respectively'. But, this answer is not satisfying because the ground reality is quite different. Belgaum taluka is facing acute drought condition and the situation is very serious. Due to failure of crops farmers are badly affected. Whatever amount

is provided that is not sufficient to tackle the scarcity conditions. Relief work should be taken up on a war-footing. There is no drinking water and there is no fodder for animals.

My question (d) is `the steps taken by the Government to compensate farmers who have lost their crops', for which the answer given is `no steps have been taken'. Therefore, I urge upon the Government to take steps to see that farmers who have lost crops are given suitable compensation, immediately.

SRI R.L. JALAPPA :About drinking water there is no dearth of money. I will ask the D.C. and if any more money is required for drinking water supply we will release more money.

ರಾಜ್ಯದಲ್ಲಿ ಕೇಂದ್ರ ಸರ್ಕಾರ ನೀಡಿದ ಗೊಬ್ಬರದ ಸಬ್ಸಿಡಿಯ ರದ್ದತಿ.

694 - ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಗೊಬ್ಬರಕ್ಕೆ ಕೇಂದ್ರ ಸರ್ಕಾರ ನೀಡಿದ್ದ ಸಬ್ಸಿಡಿ ರದ್ದುಮಾಡಿದ್ದರಿಂದ ರಸಗೊಬ್ಬರಗಳ ಬೆಲೆ ವಿಪರೀತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ?*

ಆ) *ಈ ಬೆಲೆ ಏರಿಕೆಯಿಂದ ರೈತರು ಗೊಬ್ಬರ ಕೊಳ್ಳಲಾರದ ಪರಿಸ್ಥಿತಿ ಉದ್ಭವಿಸಿದ್ದು ಗೊಬ್ಬರದ ಬಳಕೆ ಗಣನೀಯವಾಗಿ ಇಳಿದಿದೆ ಎಂಬುದು ನಿಜವೇ?*

ಇ) *ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ವಿವಿಧ ಬಗೆಯ ಗೊಬ್ಬರಗಳ ಬೇಡಿಕೆ ಪೂರೈಕೆ ಉಪಯೋಗದ ಬಗ್ಗೆ ಮಾಹಿತಿ ನೀಡುವುದು.*

ಈ) *ಪುನಃ ಸಬ್ಸಿಡಿ ನೀಡಿ ಹೆಚ್ಚಿರುವ ಗೊಬ್ಬರದ ಬೆಲೆ ಇಳಿಸಲು ಕೈಗೊಳ್ಳಲಾಗಿರುವ ಕ್ರಮಗಳಾವುವು.*

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು)

ಅ) ಕೇಂದ್ರ ಸರ್ಕಾರ ಅನಿಯಂತ್ರಿತ ರಸಗೊಬ್ಬರಗಳಿಗೆ ನೀಡುತ್ತಿರುವ ಸಬ್ಸಿಡಿಯನ್ನು ಕರ್ನಾಟಕ ರಾಜ್ಯದಲ್ಲಿ ರದ್ದುಪಡಿಸಿರುವುದಿಲ್ಲ.

ಆ) ಕೇಂದ್ರ ಸರ್ಕಾರದ ರಂಜಕ, ಪೊಟ್ಯಾಷ್ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳನ್ನು ದಿ. 25-8-92ರಂದು ಅನಿಯಂತ್ರಣಗೊಳಿಸಿದ ಮೇಲೆ ಈ ರಸಗೊಬ್ಬರಗಳ ಬೆಲೆ ಹೆಚ್ಚಾಗಿದ್ದು ರಂಜಕ ಮತ್ತು ಪೊಟ್ಯಾಷ್ ಬೇಡಿಕೆಯಲ್ಲಿ ಇಳಿಮುಖ ಕಂಡು ಬಂದಿರುತ್ತದೆ.